ಪತ್ರಿಕಾ ವರದಿ

ಹೊನ್ನಾವರದಎಸ್.ಡಿ.ಎಂ. ಕಾಲೇಜಿನಲ್ಲಿ 1992-99 ನೇ ಸಾಲಿನ ಬ್ಯಾಚ್‌ನವರಿಂದ

# ಪುನರ್ಮಿಲನ ಕಾರ್ಯಕ್ರಮ

ಹೊನ್ನಾವರ: ದಿನಾಂಕ 25-12-2022 ರ ಭಾನುವಾರ ಹೊನ್ನಾವರದಎಂ. ಪಿ. ಇ. ಸೊಸೈಟಿಯ, ಎಸ್.ಡಿ.ಎಂ.ಕಾಲೇಜಿನಆರ್.ಎಸ್. ಹೆಗಡೆ ಸಭಾಭವನದಲ್ಲಿ 1992 ರಿಂದ 1999 ರವರೆಗೆ ಬಿ.ಎ.ಪದವಿ ಅಧ್ಯಯನವನ್ನು ಪೂರೈಸಿದ ಪೂರ್ವ ವಿದ್ಯಾರ್ಥಿಗಳ ಪುನರ್ಮಿಲನ ಕಾರ್ಯಕ್ರಮ ನೆರವೇರಿತು.

ಕಾರ್ಯಕ್ರಮವನ್ನುಎಸ್.ಡಿ.ಎಂ.ಕಾಲೇಜಿನ ಪ್ರಾಚಾರ್ಯರಾದಡಾ. ವಿಜಯಲಕ್ಷ್ಮಿ ಎಂ. ನಾಯ್ಕ ಹಾಗೂ ಪೂರ್ವ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳಾದ ಡಾ. ಡಿ. ಎಲ್. ಹೆಬ್ಬಾರರವರು ದೀಪ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ಕಾಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಾಚಾರ್ಯರಾದಡಾ. ವಿಜಯಲಕ್ಷ್ಮಿ ಎಂ ನಾಯ್ಕರವರುಕಾಲೇಜಿನಅಭಿವೃದ್ಧಿಗೆ ಈ ಬ್ಯಾಚ್‌ನವರು ನೀಡಿರುವ ಕೊಡುಗೆಗಳನ್ನು ಸ್ಮರಿಸಿದರು ಹಾಗೂ ಪಾಠ ಮಾಡಿದ ಹಿರಿಯಅಧ್ಯಾಪಕರನ್ನು ಆಹ್ವಾನಿಸಿ ಗುರುವಂದನೆಯನ್ನು ಸಲ್ಲಿಸುವ ಸಂಸ್ಕಾರವನ್ನು ಬೆಳೆಸಿಕೊಳ್ಳಲು ಸಲಹೆ ನೀಡಿದರು. ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳಾದ ಡಾ.ಡಿ. ಎಲ್. ಹೆಬ್ಬಾರರವರುಕಾರ್ಯಕ್ರಮ ಏರ್ಪಡಿಸಿರುವ ಕುರಿತು ಸಂತೋಷ ವ್ಯಕ್ತಪಡಿಸಿ ಎಲ್ಲರೂಕಾಲೇಜಿನಅಭಿವೃದ್ಧಿಗಾಗಿ ಶ್ರಮಿಸೋಣಎಂದು ಹಾರೈಸಿದರು.

ಕಾರ್ಯಕ್ರಮವನ್ನು ಪ್ರೇಮಾಇವರು ಪ್ರಾರ್ಥನೆಯೊಂದಿಗೆ ಆರಂಭಿಸಿ, ವೀಣಾ ಭಂಡಾರ್ಕರ್, ಅಂಜನಾ ಶೇಟ್, ಸಾಧನಾ ನಾಯ್ಕ, ಮಮತಾ ಭಟ್ಟರವರ ಸ್ವಾಗತಗೀತೆಯೊಂದಿಗೆಆರಂಭವಾಗಿ, ದಿನೇಶ ರೇವಣಕರ್ಇವರುಅಗಲಿದ ಶಿಕ್ಷಕ ಹಾಗೂ ಸಹಪಾಠಿಗಳ ಕುರಿತು ಸಂತಾಪ ಸೂಚಿಸಿದರು.ಉದಯನಾಯ್ಕಎಲ್ಲರನ್ನೂ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದಡಾ. ವಿಜಯಲಕ್ಷ್ಮಿ ಎಂ. ನಾಯ್ಕ, ಡಾ.ಡಿ. ಎಲ್. ಹೆಬ್ಬಾರ್, ಡಾ. ಶಿವರಾಮ್ ಶಾಸ್ತ್ರಿ, ಹಾಗೂ ಎಚ್.ಟಿ. ಅರ್ಸ್ವಾರೆಇವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ 85 ಪೂರ್ವ ವಿದ್ಯಾರ್ಥಿಗಳು ತಮ್ಮ ಪರಿಚಯ ನೀಡಿ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ತದ ನಂತರದೇವರಾಜ ನಾಯ್ಕ, ವೀಣಾ ಭಂಡಾರ್ಕರ್, ದತ್ತಾತ್ರೇಯ ನಾಯ್ಕ, ಜಯಪ್ರಕಾಶಗುರುಕಾರಂತ, ಗಣಪಗೌಡ, ಊರ್ಮಿಳಾ, ಸಂಧ್ಯಾ ಪ್ರಭು, ಮಹಾದೇವಗೌಡ, ಗಂಗಾ ದೇವಾಡಿಗ, ಪ್ರಶಾಂತ ಮಡಿವಾಳ ಇವರಿಂದ ಸಾಂಸ್ಕೃತಿಕಕಾರ್ಯಕ್ರಮ ನೆರವೇರಿತು. ಜ್ಞಾನೇಶ್ ನಾಯ್ಕಇವರುಕಾರ್ಯಕ್ರಮವನ್ನು ನಿರೂಪಿಸಿದರು. ತದ ನಂತರ ಸಹಪಾಠಿಗಳು ಇಕೋ ಬೀಚ್ ಪ್ರವಾಸವನ್ನುಕೈಗೊಂಡರು.